Spl. C 36/2023
PW: 03
CW: 06

# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ</u>

**SPECIAL CASE : 36/2023**

**ಫ್ರಾ.ಸಾ. 03**

**ದೋ.ಸಾ. 06**

| | | |
|---|---|---|
| ಸಾಕ್ಷಿಯ ಹೆಸರು | : | ನರಸಿಂಹಮೂರ್ತಿ |
| ತಂದೆಯ ಹೆಸರು | : | ಲಕ್ಷ್ಮೀ ನರಸಪ್ಪ |
| ವಯಸ್ಸು | : | 57 ವರ್ಷ |
| ಉದ್ಯೋಗ | : | ಗ್ರಾಮ ಆಡಳಿತಾಧಿಕಾರಿ, ರಾಮಾಪುರ ಪಾಂಚಾಯತಿ ಗ್ರಾಮ ಪಂಚಾಯತಿ . |
| ವಾಸ | : | ಗೌರಿಬಿದನೂರು. |

**ದಿನಾಂಕ 26.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>**

ನಾನು 2023 ನೇ ಸಾಲಿನಲ್ಲಿ ಚಿಂತಾಮಣಿ ತಾಲ್ಲೂಕು , ಚಿನ್ನಸಂದ್ರ ಗ್ರಾಮ ಪಂಚಾಯತಿ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿ. 22.02.2023 ರಂದು 01.30 ರ ಸುಮಾರಿಗೆ ಪೋಲೀಸರಿಂದ ಒಂದ ದೂರವಾಣಿ ಕರೆ ಬಂದಿದ್ದು, ಅದರಂತೆ ಅವರಿಗೆ ಅಕ್ರಮವಾಗಿ ಗಾಂಜಾ ಹೊಂದಿರುವ ಬಗ್ಗೆ ಮಾಹಿತಿ ಬಂದಿದ್ದು, ದಾಳಿ ಸಮಯದಲ್ಲಿ ಪಂಚರಾಗಿ ಬರಬೇಕೆಂದು ಕೋರಿರುತ್ತಾರೆ. ಅದರಂತೆ ನಾನು ಒಪ್ಪಿ ದ್ದು, ನನ್ನನ್ನು ಮತ್ತು ಚಾಸಾ–3 ಚಾಂದ್ ಪಾಷ ರವರನ್ನು ಪೋಲೀಸರು ಠಾಣೆಗೆ ಬರ ಮಾಡಿಕೊಂಡು ನೋಟೀಸನ್ನು ಜಾರಿ ಮಾಡಿರುತ್ತಾರೆ. ಸಾಕ್ಷಿಯು ಸದರಿ ನೋಟೀಸ್ ಗಳನ್ನು ನೋಡಿ ಗುರುತಿಸಿದ್ದು,

ಅದನ್ನು ಈಗಾಗಲೇ ನಿಪಿ–1 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು **ನಿಪಿ–1 (ಸಿ)** ಎಂದು ಗುರುತಿಸಲಾಯಿತು.

3. ಅದರಂತೆ ನಾನು ಘಟನಾ ಸ್ಥಳಕ್ಕೆ ಪ್ರಾಸಾ–1,ಸಿಬ್ಬಂದಿಗಳು ಇಲಾಖಾ ವಾಹನದಲ್ಲಿ ಹೊರಟು ಸುಮಾರು ಮ. 02–30 ವೇಳೆಗೆ ಹೋಗಿರುತ್ತೇವೆ. ಸದರಿ ಸ್ಥಳಕ್ಕೆ ಒಬ್ಬ ಮಹಿಳಾ ಗೆಜೆಟೆಡ್ ಅಧಿಕಾರಿಯು ಸಹ ಬಂದಿದ್ದರು. ನಂತರ ನಾವೆಲ್ಲರೂ ನಮ್ಮ ಅಂಗ ಶೋಧನೆಯನ್ನು ಮಾಡಿಕೊಂಡು ನಮ್ಮ ಬಳಿ ಯಾವುದೇ ಗಾಂಜಾ ಇಲ್ಲದ ಬಗ್ಗೆ ಖಚಿತ ಪಡಿಸಿಕೊಂಡಿರುತ್ತೇವೆ. ನಂತರ ಪೋಲೀಸರು ಸದರಿ ಸ್ಥಳದಲ್ಲಿದ್ದ ಒಬ್ಬ ಆಸಾಮಿ ಕೈಯಲ್ಲಿ ಬ್ಯಾಗ್ ಇಡಿದುಕೊಂಡಿದ್ದು, ಆತನನ್ನು ಹಿಡಿದು ವಿಚಾರಣೆ ಮಾಡಿರುತ್ತಾರೆ. ಆಗ ಸದರಿ ವ್ಯಕ್ತಿಯು ತನ್ನ ಹೆಸರು ಬಾಸ್ಕರ್, ಬಾಗೇಪಲ್ಲಿ ಎಂದು ತಿಳಿಸಿ, ಬೆಂಗಳೂರಿ ನಲ್ಲಿ ವಾಸವಿರುವುದಾಗಿ ತಿಳಿಸಿರುತ್ತಾನೆ .

4. ನಂತರ ಪೋಲೀಸರು ನ್ಯಾಯಾದೀಶರಿಂದ ವಾರಂಟ್ ಪಡೆಯಲು ಕಾಲಾವಕಾಶ ಇಲ್ಲದ ಕಾರಣ ತನಿಖೆ ಮುಂದುವರೆಸುವ ಸಲುವಾಗಿ ಒಂದು ನೋಟೀಸ್ ಅನ್ನು ತಯಾರು ಮಾಡಿ ನಮಗೆ ಜಾರಿ ಮಾಡಿರುತ್ತಾರೆ. ಸಾಕ್ಷಿಯು ಸದರಿ ನೋಟೀಸ್ ಗಳನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ–2 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು **ನಿಪಿ–2 (ಸಿ)** ಎಂದು ಗುರುತಿಸಲಾಯಿತು.

5. ನಂತರ ಸ್ಥಳದಲ್ಲಿದ್ದ ಗೆಜೆಟೆಡ್ ಅಧಿಕಾರಿ ಆರೋಪಿಯನ್ನು ಉದ್ದೇಶಿಸಿ ಆತನ ಅಂಗ ಶೋಧನೆ ಮಾಡಲು ಮಾನ್ಯ ನ್ಯಾಯದೀಶರ ಮುಂದೆ ಹಾಜರಪಡಿಸಬೇಕಾ ಅಥವಾ ಗೆಜೆಟೆಡ್ ಅಧಿಕಾರಿಯಾದ ನನ್ನ ಮುಂದೆ ಅಂಗಶೋಧನೆ ಮಾಡಬಹುದೇ ಎಂದು ಕೇಳಲಾಗಿ ಆತನು ನಿಮ್ಮ ಮುಂದೆ ಅಂಗಶೋಧನೆ ಮಾಡಬಹುದು ಎಂದು ಒಪ್ಪಿ ರುತ್ತಾನೆ. ನಂತರ ಆರೋಪಿಯನ್ನು ಅಂಗಶೋಧನೆ ಮಾಡಲಾಗಿ ಆತನ ಜೇಬಿನಲ್ಲಿದ್ದ ಒಂದು ಸ್ಯಾಮ್ ಸಂಗ್ ಕಂಪನಿಯು ಮೊಬೈಲ್ ಇದ್ದು ಅದನ್ನು

ಮುಂದಿನ ಕ್ರಮಕ್ಕಾಗಿ ಪೋಲೀಸರು ಜಪ್ತು ಪಡಿಸಿಕೊಂಡಿರುತ್ತಾರೆ. ನಂತರ ಆತನ ಬ್ಯಾಗ್ ಅನ್ನು ಪರಿಶೀಲಿಸಲಾಗಿ ಆತನ ಬ್ಯಾಗ್ ನಲ್ಲಿ ಬಾಗಶಃ ಹೊಣಗಿದ್ದ ಮತ್ತು ಬಾಗಶಃ ಹಸಿ ಇದ್ದ ಗಾಂಜಾ ಸೊಪ್ಪು, ಹೂ , ಬೀಜಗಳನ್ನು ಒಳಗೊಂಡಿದ್ದು ಅದನ್ನು ವಿದ್ಯುತ್ ತೂಕದ ಯಂತ್ರದಲ್ಲಿ ಬ್ಯಾಗ್ ಸಮೇತ ತೂಕ ಮಾಡಿ ನೋಡಲಾಗಿ 2 ಕೆ ಜೆ 15 ಗ್ರಾಂ ಇದ್ದು , ಬ್ಯಾಗ್ ಅನ್ನು ಪ್ರತ್ಯೇಕವಾಗಿ ತೂಕ ಮಾಡಿಲಾಗಿ ಅದು 15 ಗ್ರಾಂ ಇರುತ್ತದೆ. ಸದರಿ ಗಾಂಜಾದ ಅಂದಾಜು ಬೆಲೆ 60,000/-ಎಂದು ಅಭಿಪ್ರಾಯ ಪಟ್ಟಿರುತ್ತೇವೆ. ನಂತರ ಸದರಿ ಗಾಂಜಾ ಪ್ಯಾಕೇಟ್ ಅನ್ನು ಪ್ರತ್ಯೇಕವಾಗಿ ಬಿಳಿ ಬಟ್ಟೆಯಿಂದ ಸುತ್ತಿ, ಹೊಲೆದು ಅರಗಿನ ಸಹಾಯದಿಂದ ಮೊಹರು ಮಾಡಿ ಅಮಾನತ್ತು ಪಡಿಸಿಕೊಳ್ಳಲಾಯಿತು. ಸಾಕ್ಷಿಯು ಮೊಬೈಲ್ ಅನ್ನು ನೋಡಿ ಗುರುತಿಸಿದ್ದು , ಅದನ್ನು ಈಗಾಗಲೇ ಮು. ಮಾ-1 ಎಂದು ಗುರುತಿಸಲಾಗಿದೆ .

6. ಈ ಬಗ್ಗೆ ವಿವರವಾದ ಪಂಚನಾಮೆಯನ್ನು ಮಃ 2.30 ರಿಂದ 3.30 ರವರೆಗೆ ಜರುಗಿಸಿ, ನಾನು, ಪಂಚರು ಹಾಗೂ ಅಧಿಕಾರಿಗಳು ಎಲ್ಲರೂ ಸಹಿ ಮಾಡಿರುತ್ತೇವೆ. ಸಾಕ್ಷಿ ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಲಗೇ ನಿಪಿ-5 ಎಂದು ಗುರುತಿಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-5(ಬಿ)** ಎಂದು ಗುರುತಿಸಲಾಯಿತು. ಆ ಕಾಲಕ್ಕೆ ಫೋಟೋಗಳನ್ನು ತೆಗೆದಿದ್ದು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ನಿಪಿ-6 ರಲ್ಲಿರುವ ನಾಲ್ಕು ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ. ನಾನು ಈ ಬಗ್ಗೆ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

**ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಜಿ ಎಸ್‌ಎಮ್ ರವರಿಂದಃ**

7. ನನಗೆ ಯಾವ ಠಾಣೆಯಿಂದ ದೂರವಾಣಿ ಕರೆ ಬಂದಿರುತ್ತದೆ ಎಂದು ಈಗ ನೆನಪಿಲ್ಲ. ದೂರವಾಣಿ ಕರೆ ಬಂದಾಗ ನಮ್ಮ ಕಛೇರಿಯಲ್ಲಿದ್ದೆವು.,ಆಗ ಸಮಯ ಸುಮಾರು ಮಃ 01-30 ಅಗಿತ್ತು., ಪಂಚಾಯತಿ ಕಛೇಯಿಂದ ಪೋಲೀಸ್ ಠಾಣೆಗೆ

ಹೋಗಲು 20 ನಿಮಿಷಗಳ ಕಾಲ ಬೇಕು ಎಂದರೆ ಸರಿ. ನಾವು ಠಾಣೆಗೆ ಹೋದಾಗ ಮಃ 02-00 ಗಂಟೆಯಾಗಿತ್ತು ಎಂದರೆ ಸಾಕ್ಷಿಯು ಮಃ 01-45 ಆಜು ಬಾಜು ಆಗಿತ್ತು ಎಂದು ನುಡಿದಿರುತ್ತಾರೆ. ಠಾಣೆಯಿಂದ ಹೊರಡುವಾಗ 02-30 ಆಗಿತ್ತು ಎಂದರೆ ಸಾಕ್ಷಿಯು ಠಾಣೆಯನ್ನು 02-15 ಕ್ಕೆ ಬಿಟ್ಟು 02-30 ರ ಸುಮಾರಿಗೆ ಸ್ಥಳಕ್ಕೆ ಹೋಗಿರುವುದಾಗಿ ನುಡಿದಿರುತ್ತಾರೆ.

8. ಪೋಲೀಸರು ನನಗೆ ಎರಡೂ ನೋಟೀಸ್ ಗಳನ್ನು ಠಾಣೆಯಲ್ಲಿ ನೀಡಿರುತ್ತಾರೆ. ಪೋಲೀಸರು ನೀಡಿದ ನೋಟೀಸ್ ಗಳಲ್ಲಿನ ವಿಚಾರಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ಸದರಿ ನೋಟೀಸ್ ಗಳಲ್ಲಿ ಏನು ಬರೆದಿದೆ ಎಂದರೆ ಸಾಕ್ಷಿಯು ಗಾಂಜಾ ಮಾರಾಟದ ಬಗ್ಗೆ ಪೋಲೀಸರಿಗೆ ಮಾಹಿತಿ ಬಂದಿದ್ದು,ಅವರು ತನಿಖೆ ಮಾಡುವ ಕಾಲಕ್ಕೆ ಪಂಚಾರಾಗಿ ಹಾಜರಿರುವಂತೆ ಮತ್ತು ನ್ಯಾಯಾಲಯಕ್ಕೆ ಹಾಜರಾಗಿ ಸಾಕ್ಷಿ ನುಡಿಯುುವಂತೆ ಕೇಳಿಕೊಂಡಿದ್ದರು.

9. ನಮ್ಮ ಜೊತೆ ಒಬ್ಬ ಪಿ ಎಸ್ ಐ, 3 ಜನ ಪೋಲೀಸರು ಹಾಗೂ ಬಿಲ್ ಕೆಲೆಕ್ಟರ್ ಸ್ಥಳಕ್ಕೆ ಹೋಗಿದ್ದೆವು. ಗೆಜೆಟೆಡ್ ಅಧಿಕಾರಿಯು ಸಹ ಸ್ಥಳಕ್ಕೆ ಬಂದಿದ್ದರು. ಗೆಜೆಟೆಡ್ ಅಧಿಯಾರಿಯವರು ಸ್ಥಳಕ್ಕೆ ನಮ್ಮ ಜೊತೆಯಲ್ಲಿಯೇ ಠಾಣೆಯಿಂದ ಬಂದಿದ್ದರು. ಪಿಎಸ್ಐ ಹಾಗೂ ಅವರ ಸಿಬ್ಬಂದಿಗಳ ಹೆಸರುಗಳನ್ನು ಹೇಳಲು ಬರುವುದಿಲ್ಲ.

10. ನಿಪಿ-5 ರ ಪಂಚನಾಮೆಯಲ್ಲಿ ಬರೆದಿರುವ ವಿಚಾರಗಳು ನನಗೆ ತಿಳಿದಿರುತ್ತದೆ. ಪಂಚನಾಮೆಯನ್ನು ಠಾಣೆಯಲ್ಲಿ ತಯಾರಿಸಲಾಗಿದೆ ಎಂದರೆ, ಸ್ಥಳದಲ್ಲಿ ತಯಾರಿಸಿರುವುದಾಗಿ ನುಡಿದಿರುತ್ತಾರೆ. ದಾಳಿ ಪಂಚನಾಮೆಯನ್ನು ಮಃ 2-30 ರಿಂದ 03-30 ರ ತನಕ ಜರುಗಿಸಲಾಗಿರುತ್ತದೆ. ಅಂಗ ಶೋಧನೆಯನ್ನು ಪಂಚನಾಮೆ ಜರುಗಿಸುವ ಸ್ಥಳದಲ್ಲಿ ಮಾಡಿಕೊಂಡಿರುತ್ತೇವೆ. ಅಮಾನತ್ತು ಪಡಿಸಿಕೊಂಡ ಗಾಂಜಾದ ತೂಕವನ್ನು ಸ್ಥಳದಲ್ಲಿಯೇ ಮಾಡಲಾಗಿರುತ್ತದೆ. ನಿಪಿ-6 ರ ಪೋಟೋಗಳಲ್ಲಿ

ಮಾಲನ್ನು ತುಾಕ ಮಾಡುತ್ತಿರುವ ಬಗ್ಗೆ ಕಂಡು ಬಂದಿದ್ದು, ಸ್ಥಳದಲ್ಲಿ ತೂಕ ಮಾಡಿರುವ ಬಗ್ಗೆ ಕಂಡು ಬರುವುದಿಲ್ಲ ಎಂದರೆ ಸರಿಯಲ್ಲ. ತೂಕ ಮಾಡುತ್ತಿರುವ ಪ್ಯಾಕೇಟ್ ಕವರ್ ಗಳಲ್ಲಿ ಏನು ಇದೆ ಎಂದು ನನಗೆ ತಿಳಿದಿಲ್ಲ ಎಂದರೆ ಸಾಕ್ಷಿಯು ಪೊಲೀಸರು ನನ್ನ ಸಮಕ್ಷಮ ಪರಿಶೀಲಿಸಿ ನಂತರ ತೂಕ ಮಾಡಿದ ಗಾಂಜಾ ಇರುವುದಾಗಿ ಕಂಡು ಬಂದಿರುತ್ತದೆ ಎಂದು ನುಡಿದಿರುತ್ತಾರೆ. ಬಟ್ಟೆ ಬ್ಯಾಗ್ ಅನ್ನು ತೆಗೆದು ಪ್ರತ್ಯೇಕವಾಗಿ ತುಾಕ ಮಾಡಿದ ನಂತರ ಗಾಂಜಾದ ನಿಖರ ತೂಕ 2.00 ಕೆ ಜಿ ಇತ್ತು. ನನಗೆ ಯಾವುದೇ ವಿಚಾರಗಳು ತಿಳಿಯದಿದ್ದರು ಸಹ ಪೋಲೀಸರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ-1 ನೀಲಿ ಬಣ್ಣದ ಮೊಬೈಲ್ ಆಗಿತ್ತು. ಪಂಚನಾಮೆಗೆ ಠಾಣೆಯಲ್ಲಿ ಸಹಿ ಮಾಡಿದ್ದರೂ ಸಹ ಸ್ಥಳದಲ್ಲಿ ಸಹಿ ಮಾಡಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-5 ರ ಪಂಚನಾಮೆಯಲ್ಲಿನ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನನ್ನ ಜೊತೆ ಇದ್ದ ಗೆಜೆಟೆಡ್ ಅಧಿಯಾರಿಯು ಮಹಿಳೆಯಾಗಿದ್ದು,ಅವರ ಹೆಸರು ಈಗ ನನಗೆ ನೆನಪಿಲ್ಲ. ಆರೋಪಿಯ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ಬಾಸ್ಕರ್, ಬಾಗೇಪಲ್ಲಿ ವಾಸಿ ಎಂದು ತಿಳಿಸಿದ್ದರು ಎಂದು ನುಡಿದಿರುತ್ತಾರೆ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.
Sd/-
**(ಟಿ. ಪಿ. ರಾಮಲಿಂಗೆ ಗೌಡ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.